

## ರಾಣಿಗೆ ಮದುವೆ?

‘ಇಬ್ಬರೂ ಮದುವೆಯಾಗ್ತಾರಂತೆ’– ಹೀಗಂತ ರಾಣಿ ಮುಖರ್ಜಿ ಮತ್ತು ನಿರ್ಮಾಪಕ ಆದಿತ್ಯ ಚೋಪ್ರಾ ಒಟ್ಟಿಗೇ ಕದ್ದು ಮುಚ್ಚಿ ಓಡಾಡುತ್ತಿದ್ದ ದಿನಗಳಿಂದಲೂ ಸುದ್ದಿ ಇತ್ತು. ಆದರೆ ವರ್ಷಗಳು ಉರುಳಿದರೂ ಅದು ನಿಜವಾಗಲಿಲ್ಲ. ಆದಿತ್ಯರ ಅಪ್ಪ ಯಶ್ ಚೋಪ್ರಾ ಮತ್ತು ಅಮ್ಮ ಪಮೇಲಾಗೆ ರಾಣಿ ತಮ್ಮ ಮನೆ ಸೊಸೆಯಾಗುವುದು ಇಷ್ಟವಿರಲಿಲ್ಲವಂತೆ. ಮನೆಯಲ್ಲಿ ಸಮ್ಮತಿ ಸಿಗದ ಕಾರಣಕ್ಕೆ ರಾಣಿಯಾಗಲೀ, ಆದಿತ್ಯ ಆಗಲೀ ತಮ್ಮ ಸಂಬಂಧದ ಬಗ್ಗೆ ಎಲ್ಲಿಯೂ ಬಹಿರಂಗವಾಗಿ ಮಾತನಾಡಿರಲಿಲ್ಲ.

ಇದೀಗ ಬಂದಿರುವ ಹೊಸ ಸುದ್ದಿಯ ಪ್ರಕಾರ, ಚೋಪ್ರಾ ಕುಟುಂಬದ ನಿಲುವು ಬದಲಾಗಿದೆಯಂತೆ. ಮುಂದಿನ ವರ್ಷ ಜನವರಿಯಲ್ಲಿ ರಾಣಿ– ಆದಿತ್ಯ ಸಪ್ತಪದಿ ತುಳಿಯುವುದು ನಿಶ್ಚಿತ ಎನ್ನಲಾಗುತ್ತಿದೆ. ಇತ್ತೀಚೆಗೆ ಮಾಧುರಿ ದೀಕ್ಷಿತ್ ತಂದೆ ಶಂಕರ್ ದೀಕ್ಷಿತ್‌ರ ಯೋಗಕ್ಷೇಮ ವಿಚಾರಿಸಲು ರಾಣಿ ಮತ್ತು ಆಕೆಯ ಅಮ್ಮ ಪಮೇಲಾರ ಜೊತೆ ಒಂದೇ ಕಾರಿನಲ್ಲಿ ತೆರಳಿದ್ದರಂತೆ. ಅಲ್ಲದೆ, ಸ್ವಿಝರ್ಲೆಂಡ್‌ನಲ್ಲಿ ನಡೆದ ಪಮೇಲಾರ ಹುಟ್ಟುಹಬ್ಬದ ಆಚರಣೆಯಲ್ಲೂ ರಾಣಿ ಹಾಜರಿದ್ದರಂತೆ. ಹೀಗಾಗಿ ಮಕ್ಕಳ ಪ್ರೀತಿಗೆ ಒಪ್ಪಿಗೆ ಮುದ್ರೆ ಬಿದ್ದಿದೆ ಎಂಬ ಸುದ್ದಿ ಬಿ–ಟೌನಿನ ಗಲ್ಲಿಗಳಲ್ಲಿ ಹರಿದಾಡುತ್ತಿದೆ.



## ಮಲ್ಲಿಕಾಗೆ ಭಯ

‘ಮರ್ಡರ್’ ಖ್ಯಾತಿಯ ಮಲ್ಲಿಕಾ ಶೆರಾವತ್ ಬಾಲಿವುಡ್‌ನಲ್ಲಿ ಮಾಡಿದ ಮೋಡಿ ಅಷ್ಟಿಷ್ಟಲ್ಲ. ಮೊದಲ ಚಿತ್ರದಲ್ಲಿ ಎಗ್ಗಿಲ್ಲದೆ ಹಸಿಬಿಸಿ ದೃಶ್ಯಗಳಲ್ಲಿ ಕಾಣಿಸಿಕೊಂಡು ದಿನ ಬೆಳಗಾಗುವುದರಲ್ಲಿ ‘ಖ್ಯಾತ’ರಾದ ಮಲ್ಲಿಕಾರಿಗೆ ಸನ್ನಿ ಲಿಯೋನ್‌ಳನ್ನು ಕಂಡರೆ ಭಯವಂತೆ! ಸನ್ನಿ ದೇಹ ಪ್ರದರ್ಶನದ ಏನೆಲ್ಲ ಕಸರತ್ತು ಮಾಡಿದರೂ ‘ಜಿಸ್ಮ್ 2’ನಲ್ಲಿ ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಕರೆತರಲು ಯಶಸ್ವಿಯಾಗಲಿಲ್ಲ. ಆದರೂ ಸನ್ನಿಯನ್ನು ಕಂಡರೆ ಮಲ್ಲಿಕಾಗೆ ಭಯವೇಕೆ?

‘ದಿ ಬ್ಯಾಚುಲರ್ ಇಂಡಿಯಾ– ಮೇರೆ ಖಯಾಲೋಂ ಕಿ ಮಲ್ಲಿಕಾ’ ಕಿರುತೆರೆ ರಿಯಾಲಿಟಿ ಷೋನಲ್ಲಿ ಮಲ್ಲಿಕಾ ಜೊತೆ ಸನ್ನಿ ಲಿಯೋನ್‌ರಿಗೂ ಪಾಲು ನೀಡುವುದು ವಾಹಿನಿಯ ಉದ್ದೇಶವಾಗಿತ್ತು. ಕಾರ್ಯಕ್ರಮ ನಿರ್ವಹಣೆಯಲ್ಲಿ ಸನ್ನಿ, ಮಲ್ಲಿಕಾರಿಗೆ ಸಾಥ್ ನೀಡುವ ರೀತಿಯಲ್ಲಿ ಯೋಜನೆ ರೂಪಿಸಲಾಗಿತ್ತು. ಆದರೆ ಮಲ್ಲಿಕಾ ಇದನ್ನು ಸಾರಾಸಗಟಾಗಿ ನಿರಾಕರಿಸಿದಳಂತೆ. ‘ಸನ್ನಿ ಜನಪ್ರಿಯತೆ ಮುಂದೆ ತಾವು ಮಂಕಾಗುವ ಸಾಧ್ಯತೆ ಇದೆ’ ಎಂಬ ಭಯ ಮಲ್ಲಿಕಾರನ್ನು ಕಾಡಿದೆಯಂತೆ. ಈಗ ವಾಹಿನಿಯು ಅನಿವಾರ್ಯವಾಗಿ ಸನ್ನಿ ಲಿಯೋನ್‌ರನ್ನು ಕೈಬಿಟ್ಟಿದೆ. ಅದೇ ಜಾಗಕ್ಕೆ ಮತ್ತೊಬ್ಬ ಸನ್ನಿ ಬರುತ್ತಿದ್ದಾರೆ. ಅರೆ! ಸನ್ನಿ ಲಿಯೋನ್‌ರ ಡೂಪ್ಲಿಕೇಟಾ? ಎಂಬ ಅನುಮಾನ ಬೇಡ. ಈ ಸನ್ನಿ, ‘ಲಿಯೋನ್’ ಅಲ್ಲ ‘ದೇವಲ್’. ನಟ ಸನ್ನಿ ದೇವಲ್!



## ವಿದ್ಯಾ ಬಾಲನ್ ಡಯೆಟ್ ಕಹಾನಿ

ಚಿತ್ರರಂಗದಲ್ಲಿ ಹೆಸರು ಮಾಡಲು ದೇಹ ಸೌಂದರ್ಯ ಮುಖ್ಯವಲ್ಲ, ಅಭಿನಯ ಕಲೆ ಒಲಿಸಿಕೊಂಡರೆ ಸಾಕು ಎಂಬುದನ್ನು ಮತ್ತೆ ಮತ್ತೆ ಸಾಬೀತುಪಡಿಸಿದ ನಟಿ ವಿದ್ಯಾ ಬಾಲನ್. ಅಭಿನಯದ ಜೊತೆ ಮೈಚಳಿ ಬಿಟ್ಟೂ ನಟಿಸಬಲ್ಲೆ ಎಂಬುದನ್ನು ‘ಡರ್ಟಿ ಪಿಕ್ಚರ್’ನಲ್ಲಿ ರುಜುವಾತು ಪಡಿಸಿದಳು. ಅಂತಹ ನಟಿ ಈಗ ತಮ್ಮ ದೇಹಾಕಾರದ ಬಗ್ಗೆ ತೀವ್ರ ತಲೆ ಕೆಡಿಸಿಕೊಂಡಿದ್ದಾರಂತೆ.

ಮದುವೆ ಬಳಿಕ ಕೊಂಚ ಕೊಂಚ ದಪ್ಪಗಾಗುತ್ತಿರುವ ವಿದ್ಯಾ, ಅದು ತಮ್ಮ ವೃತ್ತಿಜೀವನಕ್ಕೆ ಎರವಾಗಬಹುದು ಎಂಬ ಮುನ್ನೆಚ್ಚರಿಕೆಯಿಂದ ಕಠಿಣ ಪಥ್ಯದಲ್ಲಿ ತೊಡಗಿಕೊಂಡಿದ್ದಾಳಂತೆ. ವಿದ್ಯಾ, ದೇಹದ ತೂಕವನ್ನು ಕರಗಿಸಲು ಮತ್ತೊಂದು ಕಾರಣ ಆಕೆಯ ಹೊಸ ಚಿತ್ರ. ಇಮ್ರಾನ್ ಹಶ್ಮಿ ಜೊತೆ ‘ಘನ್‌ಚಕ್ಕರ್’ನಲ್ಲಿ ನಟಿಸಿದ್ದ ವಿದ್ಯಾ, ಪಂಜಾಬಿ ಗೃಹಿಣಿಯ ಪಾತ್ರಕ್ಕೆ ದೇಹವನ್ನು ತುಸು ಹಿಗ್ಗಿಸಿಕೊಂಡಿದ್ದು ನಿಜ. ಈಗ ಪುನಃ ಹಶ್ಮಿ ಜೊತೆ ತೆರೆ ಹಂಚಿಕೊಳ್ಳುತ್ತಿದ್ದಾರೆ ವಿದ್ಯಾ. ಅದಕ್ಕಾಗಿ ದೈಹಿಕ ಕಸರತ್ತಿನ ಜೊತೆ ಕಟ್ಟುನಿಟ್ಟಿನ ಆಹಾರ ಸೇವನೆಯೂ ನಡೆದಿದೆಯಂತೆ. ವಿದ್ಯಾಳ ಈ ವೃತ್ತಿ ಬದ್ಧತೆಗೆ ಬಾಲಿವುಡ್ ತಲೆದೂಗುತ್ತಿದೆ.

■ ಅಮಿ